
# ತಪ್ಪಾದ ಗುರುತಿಸುವಿಕೆಯ ಒಂದು ಪ್ರಕರಣ

ಪೂರ್ತಿ ಮನೆಯಿಂದ ಹೊರಗೆ ಇರಬೇಕಾಗಿತ್ತು. ಪ್ರೈಮರಿ ಓದುತ್ತಿದ್ದ ಚಿಕ್ಕ ಮಕ್ಕಳು ಮನೆಗೆ ಭೇಟಿಕೊಟ್ಟ ಮಿತ್ರರೊಬ್ಬರು ಹೇಳಿದರು– "ಒಂದು ಒಳ್ಳೆಯ ನಾಯಿ ಸಾಕಿರಿ" ಅಷ್ಟೇ ಅಲ್ಲ, ರೈತ ಹಿನ್ನೆಲೆಯಿಂದ ಬಂದ ಅವರು ಒಂದು ಒಳ್ಳೇ ತಳಿಯ ನಾಯಿಮರಿ ತಂದೇ ಕೊಟ್ಟರು. ಶಿರಸಿಯ ಬೆಚ್ಚನೆಯ ವಾತಾವರಣದಿಂದ ಬಂದ ಆ ಪುಟ್ಟಮರಿ, ಧಾರವಾಡದ ತಂಪು ಹವೆಯಲ್ಲಿ, ಮೆಲ್ಲಗೆ ಬಂದು ನಮ್ಮ ಕಾಲಿನ ಪಾದಗಳ ಮೇಲೆ ಕುಳಿತು ಕೊಳ್ಳುತ್ತಿತ್ತು.



ರ್‍ಯಾಂಬೋ ಎಂದು ನಾಮಕರಣಗೊಂಡ 'ಡಾಬರ್‌ಮನ್' ತಳಿಯ ನಾಯಿ ಆರು ತಿಂಗಳಲ್ಲೇ ದೊಡ್ಡ ಆಕಾರಕ್ಕೆ ಬೆಳೆದರೂ, ನಿರಂತರ ಮಕ್ಕಳ ಒಡನಾಟದಲ್ಲಿ ಪ್ರೀತಿಪೂರ್ಣವಾಗಿ, ನಂಬಿಗಸ್ತಿಗೆಯಿಂದ ಮನೆಕಾಯುವ ಸದಸ್ಯನಾಯಿತು. ಅನತಿ ದೂರದಲ್ಲೇ ಒಂದು ಹಳೆಯ ಕಟ್ಟಡದಲ್ಲಿ ಕೋಳಿಸಾಕಣಿಕೆಯ ಕೇಂದ್ರವಿತ್ತು. ಪರಿಪೂರ್ಣ ವ್ಯವಸ್ಥೆಗಳ ಕೊರತೆಯಿಂದ ತ್ಯಾಜ್ಯವಸ್ತುಗಳನ್ನು ಅಲ್ಲಿ ಹೊರಗೆ ಹಾಕುತ್ತಿದ್ದುದರಿಂದ ಕ್ರೂರವಾದ ಅನೇಕ ಬೀದಿನಾಯಿಗಳು, ಹಂದಿಗಳು ಆ ಪರಿಸರದಲ್ಲಿ ಇರುತ್ತಿದ್ದುದನ್ನು ನಾವು ಕಂಡಿದ್ದೆವು.

ಒಂದು ಬೆಳಿಗ್ಗೆ, ಆಘಾತಕರವಾದ ಒಂದು ಘಟನೆ ನಡೆಯಿತು. ಕೋಳಿ ಸಾಕಣಿ ಕೇಂದ್ರದ ಒಡತಿಯಾದ ಮಹಿಳೆಯು ನನ್ನ ಬಳಿ ಬಂದು ಅರೋಪದ ದನಿಯಲ್ಲಿ ಅಂದಳು – "ನಿಮ್ಮ ನಾಯಿ ನಮ್ಮ ಕೋಳಿ ಹಿಡಿದು ತಿಂದಿದೆ." ನಾನು ನಂಬಲಿಲ್ಲ "ನಮ್ಮ ನಾಯಿ ಹಸಿಮಾಂಸ ತಿನ್ನುವುದಿಲ್ಲ. ಮಕ್ಕಳು ಅದರ ಮೇಲೆ ಕುಳಿತು ಸವಾರಿ ಮಾಡಿದರೂ ಅದು ಯಾರಿಗೂ ಅಪಾಯ ಮಾಡುವುದಿಲ್ಲ" ಎಂದು ನನ್ನದೇ ರೀತಿಯಲ್ಲಿ ವಿವರಿಸಲು ತಡವರಿಸಿದೆ.ಆದರೆ ಆಕೆ ಎಂದಳು –"ನಾನು ಸ್ಪಷ್ಟವಾಗಿ ನೋಡಿದ್ದೇನೆ" ನನಗೆ ಈಗ ಉಪಾಯವಿರಲಿಲ್ಲ. ಅವಳು ಪರಿಹಾರವಾಗಿ ಕೇಳಿದ 50 ರೂಪಾಯಿಗಳನ್ನು ತೆತ್ತು ಅವಳನ್ನು ಕಳುಹಿಸಿದರೂ ನನ್ನ ಮನಸ್ಸು ಬಹಳ ಘಾಸಿಗೊಂಡಿತ್ತು. ಇದರ ಪರಿಹಾರ ಹೇಗೆ?......ಹೇಗೆ?

ರಾತ್ರಿ ಸರಿಯಾಗಿ ನಿದ್ರೆ ಇಲ್ಲ. ಬೆಳಗಿನ ಜಾವದಲ್ಲಿ ಎದ್ದು ನಮ್ಮ ಮೇಲ್ಮಾಳಿಗೆಯಲ್ಲಿ ಯೋಚನಾಪರಳಾಗಿ ನಿಂತಿದ್ದಾಗ, ಫಕ್ಕನೆ ಒಂದು ದೃಶ್ಯ ನನ್ನ ಕಣ್ಣಿಗೆ ಬಿತ್ತು. ದಷ್ಟಪುಷ್ಟವಾದ ಬೀದಿನಾಯಿಯೊಂದು ಆ ಕೇಂದ್ರದ ಬಳಿಯಿಂದ ಒಂದು ಕೋಳಿಯನ್ನು ಬಾಯಲ್ಲಿ ಹಿಡಿದುಕೊಂಡು ಮರೆಯ ಜಾಗಕ್ಕೆ ಒಯ್ಯುತ್ತಿತ್ತು. ಸುಮಾರು ನಮ್ಮ ನಾಯಿಯ ಬಣ್ಣವನ್ನೇ ಹೊಂದಿದ್ದ ಅದು ಹಸಿದಾಗ ಪುಟ್ಟ ಹಂದಿಮರಿಗಳನ್ನು ಬೇಟೆಯಾಡಿ ತಿನ್ನುವುದನ್ನು ಹಿಂದೆಯೂ ನೋಡಿದ್ದ ನಾನು, ನನ್ನ ಮಕ್ಕಳಿಗೆ ಆ ದಾರಿಯಲ್ಲಿ ಸುಳಿಯದಂತೆ ಎಚ್ಚರಿಕೆ ನೀಡಿದ್ದೆ. ನಮ್ಮ ಮನೆಯ ಕಡೆಗೆ ಓಡಿ ಬಂದ ಆ ಮಹಿಳೆ, ನಮ್ಮ "ರ್‍ಯಾಂಬೊ" ನನ್ನೊಂದಿಗೆ ನಿಂತಿದ್ದುದನ್ನು ನೋಡಿ ತೊದಲಿದಳು........ ಅದು ನಿಮ್ಮ ನಾಯಿಯಲ್ಲ...... ಮರುದಿನ ಆ ನಾಯಿಯ ಮೃತದೇಹದ ವ್ಯವಸ್ಥೆ ಮಾಡಿದುದನ್ನು ನಾನು ಕಂಡೆ.

ನನ್ನದಲ್ಲದ ಪ್ರಾಣಿಯ ತಪ್ಪಾಗಿ, ಕೆಟ್ಟ ಕೆಲಸಕ್ಕಾಗಿ ನಾನು ದಂಡ ತೆರಬೇಕಾಯಿತು. ಅಷ್ಟಕ್ಕೇ ನನಗಾದ ನೋವು, ಕಳವಳ ವಿವರಿಸಲಸಾಧ್ಯ. ಆದರೆ ಪಾಪರಹಿತನಾದ ಯೇಸುಸ್ವಾಮಿಯು ವಿಶ್ವಾಸಿಗಳ ಪಾಪಕ್ಕಾಗಿ ಘೋರವಾದ ಮರಣ, ರಕ್ತ ಸುರಿಸುವಿಕೆಯ ಬೆಲೆ ತೆತ್ತೆನು.

*"ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು. ನಮಗೆ ಸುಖಶಾಂತಿಯನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು, ಅವನು ಬಾಸುಂಡೆಗಳಿಂದ ನಮಗೆ ಗುಣವಾಯಿತು."* (ಯೆಶಾಯ 53:5) ದೇವರು ನಮ್ಮ ಪಾಪಭಾರವನ್ನು ತನ್ನ ಮಗನ ಮೇಲೆ ಹೊರಿಸಿ ನಮ್ಮ ಸ್ಥಾನದಲ್ಲಿ ಆತನನ್ನು ಕ್ರೂಜೆಯಲ್ಲಿ ಶಿಕ್ಷಿಸಿದನು. ಇದನ್ನು ನಂಬಿದವರ ಪಾಪವು ಪರಿಹರಿಸಲ್ಪಟ್ಟಿದೆ.

◆ ಸುನಯನ ವಾಲ್ಟರ್ಸ್